# ತಹಶೀಲ್ದಾರರು ಬಳ್ಳಾರಿ ರವರ ನ್ಯಾಯಾಲಯದ ನಡುವಳಿಗಳು

| ವಾದಿಗಳು: | ಪ್ರತಿವಾದಿಗಳು: |
|---|---|
| 1)ಶ್ರೀ ಈರಪ್ಪ ತಂದೆ ದಿ॥ ಸೋಮಲಾಪುರ ತಿಪ್ಪಣ್ಣ<br>2)ಶ್ರೀಮತಿ ಗೌರಮ್ಮ ಗಂಡ ದಿ॥ ತಿಮ್ಮಪ್ಪ<br>3)ಶ್ರೀ ರುದ್ರಪ್ಪ ತಂದೆ ದಿ॥ ಸೋಮಲಾಪುರ ತಿಪ್ಪಣ್ಣ | ಶ್ರೀಮತಿ ಈರಮ್ಮ ತಾಯಿ ದಿ॥ ಗಂಗಮ್ಮ |

ವಿಷಯ:--ಬಳ್ಳಾರಿ ತಾಲೂಕು ಬಳ್ಳಾರಿ ಹೋಬಳಿ ಕೊಳಗಲ್ಲು ಗ್ರಾಮದ ಸರ್ವೆ ನಂ:129, ವಿಸ್ತೀರ್ಣ:6.92 ಸರ್ವೆ ನಂ :130 ವಿಸ್ತೀರ್ಣ:4.89 ಹಾಗೂ ಸರ್ವೆ ನಂ:131 ವಿಸ್ತೀರ್ಣ:2.78 ಎಕರೆ ಪೈಕಿ ಮೂರು ಸರ್ವೆ ನಂಬರ್‌ಗಳ ಪೈಕಿ ವಿಸ್ತೀರ್ಣ: 2.00ಎಕರೆ ಜಮೀನಿಗೆ ಸಂಬಂಧಿಸಿದಂತೆ ವಿಚಾರಣೆ ಕುರಿತು.

ಪ್ರಸ್ತಾವನೆ:

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿ ತಾಲೂಕು ಬಳ್ಳಾರಿ ಹೋಬಳಿ ಕೊಳಗಲ್ಲು ಗ್ರಾಮದ ಸರ್ವೆ ನಂ:129,ವಿಸ್ತೀರ್ಣ:6.92 ಸರ್ವೆ ನಂ :130 ವಿಸ್ತೀರ್ಣ:4.89 ಹಾಗೂ ಸರ್ವೆ ನಂ:131 ವಿಸ್ತೀರ್ಣ:2.78 ಎಕರೆ ಪೈಕಿ ಮೂರು ಸರ್ವೆ ನಂಬರ್‌ಗಳ ಪೈಕಿ ವಿಸ್ತೀರ್ಣ: 2.00ಎಕರೆ ಜಮೀನನ್ನು ಕ್ರಯ ಪತ್ರದ ಸಂಖ್ಯೆ:4141/80-81 ದಿನಾಂಕ:21-01-1981ರಂದು ಶ್ರೀಮತಿ ಈರಮ್ಮ ಗಂಡ ಸೋಮಲಾಪುರ ತಿಪ್ಪಣ್ಣ ಗಂಗಮ್ಮ ಗಂಡ ರಾಮಪ್ಪ ಹಾಗೂ ಈರಮ್ಮ ಗಂಡ ಬಸಪ್ಪ ಇವರಿಂದ ಖರೀದಿಸಿರುತ್ತಾರೆ. ಅದರಂತೆ ಕೈ ಬರಹ ಪಹಣಿಯಲ್ಲಿ ಹೆಸರು ಮಾತ್ರ ನಮೂದು ಆಗಿದ್ದು ವಿಸ್ತೀರ್ಣ ನಮೂದು ಆಗಿರುವುದಿಲ್ಲ. ಕಾರಣ ಮಾನ್ಯ ಜಿಲ್ಲಾಧಿಕಾರಿಗಳ, ಬಳ್ಳಾರಿ ಇವರಲ್ಲಿ ಮೇಲ್ಮನವಿ ಸಲ್ಲಿಸಿಕೊಂಡು ಅನಭವದಂತೆ ವಿಸ್ತೀರ್ಣ ನಮೂದಿಸಲು ಕೋರಿರುತ್ತಾರೆ. ಮಾನ್ಯಜಿಲ್ಲಾಧಿಕಾರಿಗಳು, ಬಳ್ಳಾರಿ ಇವರ ಪ್ರಕಾರಣ ಅಪೀಲ್ ಸಂಖ್ಯೆ/41/2008-09ರಂತೆ ದಿನಾಂಕ:31-08-2009ರ ಪ್ರಕಾರ ಸದ್ರಿ ಸರ್ವೆನಂಬರ್‌ಗಳಲ್ಲಿ ಬರುವ ಪಟ್ಟಾದಾರರಿಗೆ ನೋಟಿಸು ನೀಡಿ ಸರ್ವೆಮಾಡಿಸಿ 11ಇ ನಕ್ಷೆ ಪ್ರಕಾರ ಅರ್ಜಿದಾರರ ಅನಭವವವು ಕ್ರಯ ಪತ್ರದಲ್ಲಿ ಚೆಕ್ ಬಂದಿಯಂತೆ ಸರ್ವೆನಂ 131ರಲ್ಲಿ ಬರುತ್ತಿದಲ್ಲಿ ಉಳಿದ ಜಂಟಿ ಪಟ್ಟಾದಾರರಿಗೆ ಹೇಳಿಕೆ ಅವಕಾಶ ನೀಡಿ ನಮೂದನೆಗಳನ್ನ ಸರ್ವಣಗೊಳಿಸಲು ಆದೇಶಿಸಲಾಗಿರುತ್ತದೆ. ಅದರಂತೆ ದಿನಾಂಕ:16-09-2013,23-09-2013,21-10-2013,03-11-2014, 17-12-2014,29-12-2014,22-12-2014, 12-01-2015,ರಂದು ವಿಚಾರಣೆ ನಡೆಸಲಾಗಿ ಹಾಗೂ ವಾದಿಗಳು ಹಾಜರಾಗಿರುತ್ತಾರೆ ಪ್ರತಿವಾದಿಗಳು ಗೈರುಹಾಜರಾಗಿರುತ್ತಾರೆ. ಈ ಸಂಬಂದ ಭೂದಾಖಲೆ ಶಾಖೆಗೆ ಸದ್ರಿ ಜಮೀನಿನ 11ಇ ನಕ್ಷೆ ತಯಾರಿಸಿ ವರದಿನೀಡಲು ಪಿ. ಶೇಕ್ಷಾವಲಿ ಸರ್ವೆ ಮೇಲ್ವಚಾರಕರು ಇವರಿಗೆ ಸೂಚಿಸಲಾಗಿತ್ತು. ಆದರೆ ಸದ್ರಿ ಗ್ರಾಮವು ಗ್ರಾಮ ವ್ಯಾಪ್ತಿಗೆ ಬರುತ್ತಿದ್ದು 11ಇ ನಕ್ಷೆ ವಿತರಣೆಮಾಡಲು ಬರುವುದಿಲ್ಲವೆಂದು ವರದಿ ನೀಡಿರುತ್ತಾರೆ. ತದನಂತರ ತಾಲೂಕು ಮೋಜಿಣಿದಾರರು, ಬಳ್ಳಾರಿ ಇವರಿಗೆ ಮೆಮೋ ನೀಡಿ ನಕ್ಷೆಯೊಂದಿಗೆ ವರದಿ ಪಡಿಯಲಾಗಿ ಶ್ರೀಮತಿ ಈರಮ್ಮ ಗಂಡ ಸೋಮಲಾಪುರ ತಿಪ್ಪಣ್ಣ ಇವರಿಗೆ ಕೊಳಗಲ್ಲು ಸರ್ವೆ ನಂ:129ರಲ್ಲಿ ವಿಸ್ತೀರ್ಣ:1.34 ಹಾಗೂ ಸರ್ವೆ ನಂ:131 ವಿಸ್ತೀರ್ಣ:0.66 ಅನಭವದಂತೆ ಜಮೀನುಹೊಂದಿರುತ್ತಾರೆಂದು ವರದಿ ನೀಡಿರುತ್ತಾರೆ. ಅದರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಸದ್ರಿ ಸರ್ವೆನಂಬರ್‌ಗಳಲ್ಲಿ ಬರುವಂತಹ ಇತರ ಪಟ್ಟಾ ದಾರರಿಗೆ ನೋಟಿಸು ನೀಡಲಾಗಿ ಸದ್ರಿ ಮೋಜಣಿದಾರರ ವರದಿಯಂತೆ ಹಕ್ಕು ಬದಲಾವಣೆ ಮಾಡಲು ನಮ್ಮಗೆ ಒಪ್ಪಿಗೆ ಇರುವುದಿಲ್ಲವೆಂದು ಹೇಳಿಕೆ ನೀಡಿರುತ್ತಾರೆ. ಕಾರಣ ಈಕೆಳಗಿನಂತೆ ಆದೇಶ

-::ಆದೇಶ::-

ಸಂ/ಕಂ/ವಿವಾದ/ 313 /2016-17

ದಿನಾಂಕ: 25/4/2016

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಬಳ್ಳಾರಿ ತಾಲೂಕು ಬಳ್ಳಾರಿ ಹೋಬಳಿ ಕೊಳಗಲ್ಲು ಗ್ರಾಮದ ಸರ್ವೆ ನಂ:129, ವಿಸ್ತೀರ್ಣ:6.92 ಸರ್ವೆ ನಂ :130 ವಿಸ್ತೀರ್ಣ:4.89 ಹಾಗೂ ಸರ್ವೆ ನಂ:131 ವಿಸ್ತೀರ್ಣ:2.78 ಎಕರೆ ಪೈಕಿ ಮೂರು ಸರ್ವೆ ನಂಬರ್‌ಗಳ ಪೈಕಿ ವಿಸ್ತೀರ್ಣ: 2.00ಎಕರೆ ಜಮೀನಿನನ್ನು ವಾದಿಗಳಾದ ಶ್ರೀಮತಿ ಈರಮ್ಮ ಗಂಡ ಸೋಮಲಾಪುರ ತಿಪ್ಪಣ್ಣ ಇವರ ಹೆಸರಿಗೆ ಪಹಣಿ ನಮೂದಿಸಲು ಸದ್ರಿ ಸರ್ವೆನಂಬರ್‌ರಿನ ಇತರೆ ಪಟ್ಟಾದಾರರು ಒಪ್ಪದ ಕಾರಣ ಹಾಗೂ ಸದ್ರಿಯವರ ಹೆಸರಿಗೆ ಕ್ರಯ ಪತ್ರಗಳಿದ್ದು ಅನುಭವದ ಪ್ರಕಾರ ವಾದಿಗಳ ವಿಸ್ತೀರ್ಣ ನಮೂದಿಸಿದಲ್ಲಿ ಇತರೆ ಪಟ್ಟಾದಾರರ ವಿಸ್ತೀರ್ಣ ಕಡಿವೆಯಾಗುತ್ತದೆ. ಇತರೆ ಪಟ್ಟಾದಾರರ ವಿಸ್ತೀರ್ಣ ಹೆಚ್ಚು ಕಡಿಮೆ ಮಾಡಲು ನನ್ನಗೆ ಅಧಿಕಾರ ವಿರುವುದಿಲ್ಲ ಕಾರಣ ಈ ವಿಷಯ ಸಂಬಂಧ ಸೂಕ್ತ ಮಾನ್ಯ ಸಿವಿಲ್ ನ್ಯಾಯಲಯದಲ್ಲಿ ಮೇಲ್ಮನವಿ ಸಲ್ಲಿಸಕೊಂಡು ಪರಿಹಾರ ಕೊಂಡುಕೊಳ್ಳಲ್ಲು ಆದೇಶಿಸಲಾಗಿದೆ.

ಈ ಆದೇಶವು ಇಂದು ದಿನಾಂಕ: 25.4.16 ರಂದು ನ್ಯಾಯಾಲಯದಲ್ಲಿ ಘೋಷಿಸಲಾಯಿತು.

25/4/16

ತಹಶೀಲ್ದಾರರು

ತಹಶೀಲ್ದಾರರು, ಬಳ್ಳಾರಿ

Tasildar, Bellary.

ಪ್ರತಿಯನ್ನು:

1.ವಾದಿಗಳು

2.ಶಿರಸ್ತೇದಾರರು ಭೂಮಿ ಗಣಿಕೀಕರಣ ಕೇಂದ್ರ ಶಾಖೆಗೆ ಸೂಕ್ತ ಕ್ರಮಕ್ಕಾಗಿ.

3.ಆದೇಶದ ಕಡತಕ್ಕೆ.